# ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

**(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)**

**ಮೊಬೈಲ್ ಸಂಖ್ಯೆ: 9449597428**
**ಇಮೇಲ್: seraichur@gmail.com**
**ಲಗತ್ತುಗಳು:**

**ಅಧೀಕ್ಷಕ ಅಭಿಯಂತರರು**
**ಕಾರ್ಯ ಮತ್ತು ಪಾಲನೆ ವೃತ್ತ ಜೆಸ್ಕಾಂ**
**ರಾಯಚೂರು ರವರ ಕಚೇರಿ**

---

**ಪ.ಸಂ:ಅಅ/ಕಾ.ನಿ.ಅ/ಸ.ಕಾ.ನಿ/ಕಾ&ಪಾ/ವೃತ್ತ/ಜೆಸ್ಕಾಂ/ರಾಯಚೂರು/20-21/ 1618-24** **ದಿನಾಂಕ: 16.08.2021**

## ರಾಯಚೂರು ವೃತ್ತ ವ್ಯಾಪ್ತಿಯ ಹೆಚ್.ಟಿ.ಗ್ರಾಹಕರೊಂದಿಗೆ ನಡೆಸಿದ ಸಂವಾದ ಸಭೆಯ ನಡಾವಳಿಗಳು

| | | |
|---|---|---|
| **ಅಧ್ಯಕ್ಷರು** | : | **ಶ್ರೀ ಚಂದ್ರಶೇಖರ ದೇಸಾಯಿ**<br>**ಅಧೀಕ್ಷಕ ಅಭಿಯಂತರರು (ಪ್ರಭಾರಿ)**<br>**ಕಾರ್ಯ ಮತ್ತು ಪಾಲನಾ ವೃತ್ತ, ಜೆಸ್ಕಾಂ, ರಾಯಚೂರು.** |
| **ದಿನಾಂಕ** | : | **28.07.21 / 11:00 AM** |
| **ಸ್ಥಳ** | : | **ಕ.ವಿ.ಪ್ರ.ನಿ.ನಿ, ನೌಕರರ ಪತ್ತಿನ ಸಹಕಾರ ಸಂಘ, ರಾಯಚೂರು.** |

**ಸಭೆಯಲ್ಲಿ ಉಪಸ್ಥಿತರಿದ್ದವರು:**

1. **ಶ್ರೀ ಗೋನಪ್ಪ ಕಾರ್ಯನಿರ್ವಾಹಕ ಅಭಿಯಂತರರು TL & SS ವಿಭಾಗ ಕವಿಪ್ರನಿನಿ ರಾಯಚೂರು.**
2. **ಶ್ರೀ ರಿಯಾಜ್ ಅಹಮದ್ ಕಾರ್ಯನಿರ್ವಾಹಕ ಅಭಿಯಂತರರು TL & SS ವಿಭಾಗ ಕವಿಪ್ರನಿನಿ ಲಿಂಗಸೂಗೂರು.**
3. **ಶ್ರೀ ರಾಜೇಶ್ ವರ್ಮಾ ಕಾರ್ಯನಿರ್ವಾಹಕ ಅಭಿಯಂತರರು ಕಾ ಮತ್ತು ಪಾ ವಿಭಾಗ ಜೆಸ್ಕಾಂ ಸಿಂಧನೂರು.**
4. **ಶ್ರೀ ರಾಜೇಶ್ ಕುಮಾರ್ ಕಾರ್ಯನಿರ್ವಾಹಕ ಅಭಿಯಂತರರು( ಪ್ರಭಾರಿ) ವೃತ್ತ ಕಚೇರಿ ಜೆಸ್ಕಾಂ ರಾಯಚೂರು.**
5. **ಶ್ರೀ ಕನಕಿ ಮಹೇಶ ಉಪ ಲೆಕ್ಕ ನಿಯಂತ್ರಣಾಧಿಕಾರಿ (ಪ್ರಭಾರಿ) ಕಾ ಮತ್ತು ಪಾ ವೃತ್ತ ಜೆಸ್ಕಾಂ ರಾಯಚೂರು.**
6. **ಶ್ರೀ ಎನ್. ಗಣೇಶ್ ಲೆಕ್ಕಾಧಿಕಾರಿಗಳು ಕಾ ಮತ್ತು ಪಾ ವಿಭಾಗ ಜೆಸ್ಕಾಂ ರಾಯಚೂರು ಗ್ರಾಮೀಣ.**
7. **ಶ್ರೀ ಬಿ.ಆರ್.ಚಿರಂಜೀವಿ ಸ.ಕಾ.ನಿ ಅಭಿಯಂತರರು ಕಾ ಮತ್ತು ಪಾ ನಗರ ಉಪವಿಭಾಗ-1 ಜೆಸ್ಕಾಂ ರಾಯಚೂರು.**
8. **ಶ್ರೀ ವಿನಯ್ ಸ.ಕಾ.ನಿ ಅಭಿಯಂತರರು ಕಾ ಮತ್ತು ಪಾ ನಗರ ಉಪವಿಭಾಗ-2 ಜೆಸ್ಕಾಂ ರಾಯಚೂರು.**
9. **ಶ್ರೀ ಬನ್ನೆಪ್ಪ ಕರಿಬಂಟನಾಳ ಸ.ಕಾ.ನಿ ಅಭಿಯಂತರರು ಕಾ ಮತ್ತು ಪಾ ಉಪವಿಭಾಗ ಜೆಸ್ಕಾಂ ಸಿರಿವಾರ.**
10. **ಶ್ರೀ ಪಂಪನಗೌಡ ಸ.ಕಾ.ನಿ ಅಭಿಯಂತರರು ಕಾ ಮತ್ತು ಪಾ ಉಪವಿಭಾಗ ಜೆಸ್ಕಾಂ ಮಾನ್ವಿ.**
11. **ಶ್ರೀ ವಿದ್ಯಾಸಾಗರ ವಿ.ಎಸ್ ಸ.ಕಾ.ನಿ ಅಭಿಯಂತರರು ಹೆಚ್.ಟಿ ಉಪವಿಭಾಗ ಜೆಸ್ಕಾಂ ರಾಯಚೂರು.**

~~~~~~~~

ಸಭೆಯ ಅಧ್ಯಕ್ಷರು, ಮೊದಲಿಗೆ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಗ್ರಾಹಕರಿಗೂ ಮತ್ತು ಎಲ್ಲಾ ಅಧಿಕಾರಿ ರವರಿಗೆ ಸ್ವಾಗತಿಸಿ, ಗ್ರಾಹಕರೊಂದಿಗೆ ಸಂವಾದ ಪ್ರಾರಂಭಿಸಿದರು. ಈ ಸಭೆಯಲ್ಲಿ ಒಟ್ಟು 14 ಅರ್ಜಿಗಳನ್ನು ಗ್ರಾಹಕರಿಂದ ಸ್ವೀಕರಿಸಲಾಯಿತು ಮತ್ತು ಅವುಗಳಲ್ಲಿ ಕೆಲವಕ್ಕೆ ಸಭೆಯಲ್ಲಿಯೇ ಕ್ರಮ ತೆಗೆದುಕೊಳ್ಳಲಾಯಿತು ಮತ್ತು ಇನ್ನು ಕೆಲವಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ಸಂಬಂಧಪಟ್ಟ ಅಧಿಕಾರಿವರಿಗೆ ಸೂಚಿಸಲಾಯಿತು. ಸಭೆಯಲ್ಲಿ ಗ್ರಾಹಕರಿಂದ ಸ್ವೀಕರಿಸಿದ ಅಹವಾಲುಗಳ ಮತ್ತು ಅವುಗಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ ವಿವರ ಈ ಕೆಳಗಿನಂತೆ ಇರುವುದು.

| **ಕ್ರಮ ಸಂಖ್ಯೆ** | **01 / 28.07.2021** |
|---|---|
| **ಗ್ರಾಹಕರ ಕುಂದು ಕೊರತೆ ವಿವರ** | ಸ್ಥಾವರ ಸಂಖ್ಯೆ HTR134 ವೈಷ್ಣವಿ ಕಾಸ್ಮೆಟಿಕ್ಸ್ ರಾಯಚೂರು ನಗರ ಗ್ರಾಹಕರು, ತಮ್ಮ ಸ್ಥಾವರದಲ್ಲಿ ಪೂರೈಸಲಾಗುತ್ತಿರುವ ವೋಲ್ಟೇಜ್ ಪ್ರಮಾಣದಲ್ಲಿ, ಮೇಲಿಂದ ಮೇಲೆ ಹೆಚ್ಚು ಕಡಿಮೆ ಯಾಗಿ ಸ್ಥಾವರದಲ್ಲಿ ಬಳಸುತ್ತಿರುವ ವಿದ್ಯುತ್ ಉಪಕರಣಗಳಿಗೆ ಮತ್ತು ನಮ್ಮ ದೈನಂದಿನ ಚಟುವಟಿಕೆಗಳಿಗೆ ತೊಂದರೆ ಆಗುತ್ತಿದೆ ಎಂದು ದೂರನ್ನು ಮೌಖಿಕವಾಗಿ ಸಭೆಯಲ್ಲಿ ತಿಳಿಸಿ ಅದನ್ನು ಸರಿಪಡಿಸಲು ಕೋರಿದರು. |
| **ಕ್ರಮ** | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ-2 ಜೆಸ್ಕಾಂ ರಾಯಚೂರು ಮತ್ತು ಶಾಖಾಧಿಕಾರಿ-4 ರವರಿಗೆ ಈ ಸ್ಥಾವರಕ್ಕೆ ಭೇಟಿ ಕೊಟ್ಟು ಖುದ್ದಾಗಿ ಪರಿಶೀಲಿಸಿ ಇವರ ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ಈ ಕಚೇರಿಗೆ ಒಂದು ವಾರದಲ್ಲಿ ವರದಿ ಸಲ್ಲಿಸಲು ಸೂಚಿಸಲಾಯಿತು |
~~~~~~~~

| ಕ್ರಮ ಸಂಖ್ಯೆ | 02 / 28.07.2021 |
|---|---|
| ಕುಂದು ಕೊರತೆ ವಿವರ | ಸ್ಥಾವರ ಸಂಖ್ಯೆ HTR42 ವಿ.ಜಿ ಕುಲಕರ್ಣಿ ಆಸ್ಪತ್ರೆ ರಾಯಚೂರು ನಗರ ಗ್ರಾಹಕರು, ಸ್ಥಾವರದಲ್ಲಿ ಪೂರೈಸಲಾಗುತ್ತಿರುವ ವೋಲ್ಟೇಜ್ ಪ್ರಮಾಣದಲ್ಲಿ, ಮೇಲಿಂದ ಮೇಲೆ ಹೆಚ್ಚು ಕಡಿಮೆ ಯಾಗಿ ಸ್ಥಾವರದಲ್ಲಿ ಬಳಸುತ್ತಿರುವ ವಿದ್ಯುತ್ ಉಪಕರಣಗಳಿಗೆ ಮತ್ತು ನಮ್ಮ ದೈನಂದಿನ ಚಟುವಟಿಕೆಗಳಿಗೆ ತೊಂದರೆ ಆಗುತ್ತಿದೆ ಎಂದು ದೂರನ್ನು ಮೌಖಿಕವಾಗಿ ಸಭೆಯಲ್ಲಿ ತಿಳಿಸಿ ಅದನ್ನು ಸರಿಪಡಿಸಲು ಕೋರಿದರು. |
| ಕ್ರಮ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ-2 ಜೆಸ್ಕಾಂ ರಾಯಚೂರು ಮತ್ತು ಶಾಖಾಧಿಕಾರಿ-4 ರವರಿಗೆ ಈ ಸ್ಥಾವರಕ್ಕೆ ಭೇಟಿ ಕೊಟ್ಟು ಖುದ್ದಾಗಿ ಪರಿಶೀಲಿಸಿ ಇವರ ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ಈ ಕಚೇರಿಗೆ ಒಂದು ವಾರದಲ್ಲಿ ಸಲ್ಲಿಸಲು  ಸೂಚಿಸಲಾಯಿತು |

| ಕ್ರಮ ಸಂಖ್ಯೆ | 03 / 28.07.2021 |
|---|---|
| ಕುಂದು ಕೊರತೆ ವಿವರ | ಸ್ಥಾವರ ಸಂಖ್ಯೆ HTR67 ಆರ್.ಕೆ.ಬಿ ಆಗ್ರೋ ಇಂಡಸ್ಟ್ರೀಸ್ ರಾಯಚೂರು ಗ್ರಾಹಕರು ನಮ್ಮ ಸ್ಥಾವರಕ್ಕೆ ನೀಡುವ ಬಿಲ್ಲಿನಲ್ಲಿ ಸುಮಾರು 1 ವರ್ಷದಿಂದ  ಅನವಶ್ಯಕವಾಗಿ ಬಡ್ಡಿಯನ್ನು ಹಾಕಲಾಗುತ್ತಿದೆ, ಈ ಬಡ್ಡಿಯನ್ನು ಬಿಲ್ ಮೊತ್ತದಲ್ಲಿ ತೆಗೆಸಿ, ಪರಿಷ್ಕೃತ ಬಿಲ್ ಪಡೆಯಲು ಹಲವಾರು ಬಾರಿ ತಮ್ಮ ಕಚೇರಿಗೆ ನಾವು ಅಲೆದಾಡಬೇಕಾಗಿದೆ ಮತ್ತು ತಾವು ವಿತರಿಸುವ ಬಿಲ್ ನ ಪ್ರಿಂಟ್ ನ ಗುಣಮಟ್ಟ ಸರಿಯಾಗಿ ಇರುವುದಿಲ್ಲ, ಅದರಲ್ಲಿ ಏನು ಪ್ರಿಂಟ್ ಆಗಿದೆ ಎಂದು ಸರಿಯಾಗಿ ಕಾಣುವುದಿಲ್ಲ ಎಂದು, ಸಭೆಯಲ್ಲಿ ಮೌಖಿಕವಾಗಿ ತಮ್ಮ ಕುಂದು ಕೊರತೆ ವಿವರಿಸಿ ಅದನ್ನು ಸರಿಪಡಿಸಲು ಕೋರಿರುತ್ತಾರೆ. |
| ಕ್ರಮ | ಈ ವಿಷಯವಾಗಿ ನಗರ ವಿಭಾಗದ ಲೆಕ್ಕಾಧಿಕಾರಿಗಳನ್ನು ವಿಚಾರಿಸಿದಾಗ, ತಾಂತ್ರಿಕ ದೋಷದಿಂದಾಗಿ ಈ ರೀತಿ ಆ ಸ್ಥಾವರಕ್ಕೆ ಬಿಲ್ ಮೊತ್ತದಲ್ಲಿ ಬಡ್ಡಿ ಜಮಾ ಆಗುತ್ತಿದೆ, ಇದನ್ನು ಸರಿಪಡಿಸಲು ಈಗಾಗಲೇ ಟಿಕೆಟ್ ರೈಜ್ ಮಾಡಲಾಗಿದೆ, ಸಧ್ಯಕ್ಕೆ ಆ ಬಿಲ್ ನ್ನು ನಾವು ಪರಿಷ್ಕರಿಸಿ ನೀಡುತ್ತಿದ್ದೇವೆ' ಈ ತಾಂತ್ರಿಕ ಸಮಸ್ಯೆಯನ್ನು ಈ ತಿಂಗಳು ಬಗೆಹರಿಸುತ್ತೇವೆ ಮತ್ತು ಅವರಿಗೆ ಸರಿಯಾಗಿ ಪ್ರಿಂಟ್ ಆಗಿರುವ ಬಿಲ್ ನೀಡುವ ವ್ಯವಸ್ಥೆ ಮಾಡುತ್ತೇವೆ ಹಾಗೂ ಅವರಿಗೆ ವಾಟ್ಸಪ್ ಮತ್ತು ಇ ಮೇಲ್ ಮುಖಾಂತರ ಬಿಲ್ ಕಳುಹಿಸುತ್ತೇವೆ ಎಂದು ಸಭೆಯಲ್ಲಿ ಗ್ರಾಹಕರಿಗೆ ತಿಳಿಸಿದರು. |

| ಕ್ರಮ ಸಂಖ್ಯೆ | 04 / 28.07.2021 |
|---|---|
| ಕುಂದು ಕೊರತೆ ವಿವರ | ಶ್ರೀ ಲಕ್ಷ್ಮಿ ರೆಡ್ಡಿ ಅಧ್ಯಕ್ಷರು ಮಿಲ್ಲರ್ಸ್ ಅಸೋಶಿಯೇಶನ್ ರಾಯಚೂರು ಅವರು ಈ ಕಳೆದ ಹೆಚ್.ಟಿ ಗ್ರಾಹಕರ ಸಂವಾದ ಸಭೆಯಲ್ಲಿ, ಶಕ್ತಿನಗರ ದಲ್ಲಿ ಈಗಿರುವ ಶಾಖೆಯನ್ನು ತೆಗೆದು ಅಲ್ಲಿ ಒಂದು ಹೊಸ ಉಪವಿಭಾಗವನ್ನು ಮಂಜೂರು ಮಾಡಬೇಕು, ಅದರಿಂದ ಅಲ್ಲಿರುವ ಎಲ್ಲಾ ಹೆಚ್.ಟಿ ಗ್ರಾಹಕರಿಗೆ ಅನುಕೂಲ ಆಗುತ್ತದೆ ಎಂದು, ಆಗಿನ ಜೆಸ್ಕಾಂ ನ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಲ್ಲಿ ಮನವಿ ಮಾಡಲಾಗಿತ್ತು, ಆದರೆ ಈವರೆಗೂ ಕೂಡ ಅದು ಮಂಜೂರು ಆಗಿರುವುದಿಲ್ಲ. ಆದಷ್ಟು ಶೀಘ್ರವಾಗಿ ಶಕ್ತಿನಗರದಲ್ಲಿ ಹೊಸ ಉಪವಿಭಾಗವನ್ನು ತೆಗೆದು ನಮಗೆ ಅನುಕೂಲ ಮಾಡಿಕೊಡಬೇಕು ಎಂದು ಕೋರಿದರು. |
| ಕ್ರಮ | ಈ ವಿಷಯವಾಗಿ ಗ್ರಾಹಕರಿಗೆ ಅನುಕೂಲವಾಗುವ ದೃಷ್ಟಿಯಲ್ಲಿ ಶಕ್ತಿನಗರ ದಲ್ಲಿ ಈಗಿರುವ ಶಾಖೆಯನ್ನು ಉಪವಿಭಾಗವಾಗಿ ಮೇಲ್ದರ್ಜೆಗೇರಿಸಲು ಈಗಾಗಲೇ ಪ್ರಸ್ತಾವನೆಯನ್ನು ನಿಗಮ ಕಚೇರಿಗೆ ಸಲ್ಲಿಸಲಾಗಿದೆ ಆದಷ್ಟು ಶೀಘ್ರವಾಗಿ ಉಪ ವಿಭಾಗ ಮಂಜೂರು ಮಾಡಲು ಮತ್ತೊಮ್ಮೆ ಕೋರಲಾಗುವುದು ಎಂದು ಗ್ರಾಹಕರಿಗೆ ವಿವರಿಸಲಾಯಿತು. |

| ಕ್ರಮ ಸಂಖ್ಯೆ | 05 / 28.07.2021 |
|---|---|
| ಕುಂದು ಕೊರತೆ ವಿವರ | ಹೆಚ್ ಟಿ ಸ್ಥಾವರ ಸಂಖ್ಯೆ 154 ಗ್ರಾಹಕರು ಶಾಶ್ವತ ವಿದ್ಯುತ್ ನಿಲುಗಡೆ ಕೋರಿ ಅರ್ಜಿ ಸಲ್ಲಿಸಲಾಗಿತ್ತು ಈಗ ನಿಲುಗಡೆ ಆಗಿರುತ್ತದೆ ಆದರೆ ಭದ್ರತಾ ಠೇವಣಿಯನ್ನು ಮರುಪಾವತಿ ಮಾಡಿರುವುದಿಲ್ಲ ಆದಷ್ಟು ಶೀಘ್ರವಾಗಿ ಮಾಡಿ ಎಂದು ಕೋರಿದರು |
| ಕ್ರಮ | ಈ ವಿಷಯವಾಗಿ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಿಗೆ ಮತ್ತು ಲೆಕ್ಕಾಧಿಕಾರಿಗಳಿಗೆ ಆದಷ್ಟು ಶೀಘ್ರವಾಗಿ ಭದ್ರತಾ ಠೇವಣಿಯನ್ನು ಮರುಪಾವತಿ ಮಾಡಲು ಸೂಚಿಸಲಾಯಿತು. |

| ಕ್ರಮ ಸಂಖ್ಯೆ | 06 / 28.07.2021 |
|---|---|
| ಕುಂದು ಕೊರತೆ ವಿವರ | ಹೆಚ್ ಟಿ ಸ್ಥಾವರ ಸಂಖ್ಯೆ 141 ಗ್ರಾಹಕರು ಶಾಶ್ವತ ವಿದ್ಯುತ್ ನಿಲುಗಡೆ ಕೋರಿ ಅರ್ಜಿ ಸಲ್ಲಿಸಲಾಗಿತ್ತು ಈಗ ನಿಲುಗಡೆ ಆಗಿರುತ್ತದೆ ಆದರೆ ಭದ್ರತಾ ಠೇವಣಿಯನ್ನು ಮರುಪಾವತಿ ಮಾಡಿರುವುದಿಲ್ಲ ಆದಷ್ಟು ಶೀಘ್ರವಾಗಿ ಮಾಡಿ ಎಂದು ಕೋರಿದರು |
| ಕ್ರಮ | ಈ ವಿಷಯವಾಗಿ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಿಗೆ ಮತ್ತು ಲೆಕ್ಕಾಧಿಕಾರಿಗಳಿಗೆ ಆದಷ್ಟು ಶೀಘ್ರವಾಗಿ ಭದ್ರತಾ ಠೇವಣಿಯನ್ನು ಮರುಪಾವತಿ ಮಾಡಲು ಸೂಚಿಸಲಾಯಿತು. |

| ಕ್ರಮ ಸಂಖ್ಯೆ | 07 / 28.07.2021 |
|---|---|
| ಕುಂದು ಕೊರತೆ ವಿವರ | ಹೆಚ್ ಟಿ ಸ್ಥಾವರ ಸಂಖ್ಯೆ 56 ಗ್ರಾಹಕರು ಶಾಶ್ವತ ವಿದ್ಯುತ್ ನಿಲುಗಡೆ ಕೋರಿ ಅರ್ಜಿ ಸಲ್ಲಿಸಲಾಗಿತ್ತು ಈಗ ನಿಲುಗಡೆ ಆಗಿರುತ್ತದೆ ಆದರೆ ಭದ್ರತಾ ಠೇವಣಿಯನ್ನು ಮರುಪಾವತಿ ಮಾಡಿರುವುದಿಲ್ಲ ಆದಷ್ಟು ಶೀಘ್ರವಾಗಿ ಮಾಡಿ ಎಂದು ಕೋರಿದರು |
| ಕ್ರಮ | ಈ ವಿಷಯವಾಗಿ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಿಗೆ ಮತ್ತು ಲೆಕ್ಕಾಧಿಕಾರಿಗಳಿಗೆ ಆದಷ್ಟು ಶೀಘ್ರವಾಗಿ ಭದ್ರತಾ ಠೇವಣಿಯನ್ನು ಮರುಪಾವತಿ ಮಾಡಲು ಸೂಚಿಸಲಾಯಿತು. |

| ಕ್ರಮ ಸಂಖ್ಯೆ | 08 / 28.07.2021 |
|---|---|
| ಕುಂದು ಕೊರತೆ ವಿವರ | ಹೆಚ್. ಟಿ ಸ್ಥಾವರ ಸಂಖ್ಯೆ 44 ಗ್ರಾಹಕರು ಜೆಸ್ಕಾಂಗೆ 8ಲಕ್ಷ ವಿದ್ಯುತ್ ಬಿಲ್ ಪಾವತಿ ಮಾಡಲು ಚೆಕ್ ನೀಡಿದ್ದು, ನಮ್ಮ ಅಕೌಂಟ್ ನಲ್ಲಿ ಸಾಕಷ್ಟು ಹಣ ಇದ್ದರೂ ಕೂಡ ಬ್ಯಾಂಕಿನಲ್ಲಿನ ತಾಂತ್ರಿಕ ದೋಷಗಳಿಂದಾಗಿ ಚೆಕ್ ಡಿಸ್ ಆನರ್ ಆಗಿರುತ್ತದೆ, ಈ ಚೆಕ್ ಡಿಸ್ ಆನರ್ ಆಗಿರುವುದು ಇನ್ಸಫಿಶಿಯೆಂಟ್ ಬ್ಯಾಲೆನ್ಸ್ ನಿಂದ ಅಲ್ಲ, ಬದಲಾಗಿ ತಾಂತ್ರಿಕ ದೋಷಗಳಿಂದ ಆದರೆ ತಾವು ರೂಗಳಷ್ಟು ಚೆಕ್ ಡಿಸಾನರ್ ಶುಲ್ಕವನ್ನು 17,000/- ರೂ ಗಳನ್ನು ದಂಡದ ರೂಪದಲ್ಲಿ ಪಾವತಿಸಿ ಕೊಂಡಿರುತ್ತೀರಿ ಇದು ಸರಿಯಲ್ಲ. ಆ ಹಣವನ್ನು ನಮಗೆ ಹಿಂತಿರುಗಿಸಬೇಕು ಎಂದು ಕೋರಿದರು. |
| ಕ್ರಮ | ಈ ವಿಷಯವಾಗಿ ಕಾರ್ಯ ಮತ್ತು ಪಾಲನೆ ರಾಯಚೂರು ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಿಗೆ ಮತ್ತು ಲೆಕ್ಕಾಧಿಕಾರಿಗಳಿಗೆ ಆದಷ್ಟು ಶೀಘ್ರವಾಗಿ, ಕಂಪನಿಯ ನಿಯಾಮನುಸಾರ ಕ್ರಮ ಜರುಗಿಸಿ ಆ ಹಣವನ್ನು ಹಿಂತಿರುಗಿಸಲು ಸೂಚಿಸಲಾಯಿತು. |

| | |
|---|---|
| **ಕ್ರಮ ಸಂಖ್ಯೆ** | **09 / 28.07.2021** |
| **ಕುಂದು ಕೊರತೆ ವಿವರ** | ಹೆಚ್ ಟಿ ಸ್ಥಾವರ ಸಂಖ್ಯೆ 11 ಗ್ರಾಹಕರು ಶಾಶ್ವತ ವಿದ್ಯುತ್ ನಿಲುಗಡೆ ಕೋರಿ ಅರ್ಜಿ ಸಲ್ಲಿಸಲಾಗಿತ್ತು ಈಗ ನಿಲುಗಡೆ ಆಗಿರುತ್ತದೆ ಆದರೆ ಭದ್ರತಾ ಠೇವಣಿಯನ್ನು ಮರುಪಾವತಿ ಮಾಡಿರುವುದಿಲ್ಲ ಆದಷ್ಟು ಶೀಘ್ರವಾಗಿ ಮಾಡಿ ಎಂದು ಕೋರಿದರು |
| **ಕ್ರಮ** | ಈ ವಿಷಯವಾಗಿ ಕಾರ್ಯ ಮತ್ತು ಪಾಲನೆ ರಾಯಚೂರು ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಿಗೆ ಮತ್ತು ಲೆಕ್ಕಾಧಿಕಾರಿಗಳಿಗೆ ಆದಷ್ಟು ಶೀಘ್ರವಾಗಿ ಭದ್ರತಾ ಠೇವಣಿಯನ್ನು ಮರುಪಾವತಿ ಮಾಡಲು ಸೂಚಿಸಲಾಯಿತು. |

| | |
|---|---|
| **ಕ್ರಮ ಸಂಖ್ಯೆ** | **10 / 28.07.2021** |
| **ಕುಂದು ಕೊರತೆ ವಿವರ** | ಬಾಲಾಜಿ ಹೈಟೆಕ್ ಇಂಡಸ್ಟ್ರೀಸ್ ಎಫ್-1 ಫಿಡರ್ ಮಂಚಲಾಪುರ ರಸ್ತೆಯಲ್ಲಿರುವ ನಮ್ಮ ಸ್ಥಾವರಕ್ಕೆ ಇರುವ ಲೈನ್ ಕಂಡಕ್ಟರ್ ತುಂಬಾ ಹಳೆಯದಾಗಿದ್ದು ಇದರಿಂದ ಪದೇ ಪದೇ ಸಮಸ್ಯೆ ಬರುತ್ತಿದೆ ಇದನ್ನು ಸರಿಪಡಿಸಿ ಎಂದು ಕೋರಿದರು. |
| **ಕ್ರಮ** | ಈ ವಿಷಯವಾಗಿ ಕಾರ್ಯ ಮತ್ತು ಪಾಲನೆ ರಾಯಚೂರು ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಿಗೆ, ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನು ಮತ್ತು ಶಾಖಾಧಿಕಾರಿಗಳನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಈ ಸಮಸ್ಯೆಯನ್ನು ಬಗೆಹರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು. |

| | |
|---|---|
| **ಕ್ರಮ ಸಂಖ್ಯೆ** | **11 / 28.07.2021** |
| **ಕುಂದು ಕೊರತೆ ವಿವರ** | 11 ಕೆವಿ ಎಫ್-3 ಫಿಡರ್ ನಿಂದ ವಿದ್ಯುತ್ ಪಡೆಯುವ ಎಚ್ ಟಿ ಸ್ಥಾವರದ ಗ್ರಾಹಕರು ನಮ್ಮ ಸ್ಥಾವರಕ್ಕೆ ಇರುವ ಲೈನ್ ಕಂಡಕ್ಟರ್ ತುಂಬಾ ಹಳೆಯದಾಗಿದ್ದು ಇದರಿಂದ ಪದೇ ಪದೇ ಸಮಸ್ಯೆ ಬರುತ್ತಿದೆ ಇದನ್ನು ಸರಿಪಡಿಸಿ ಎಂದು ಕೋರಿದರು. |
| **ಕ್ರಮ** | ಈ ವಿಷಯವಾಗಿ ಕಾರ್ಯ ಮತ್ತು ಪಾಲನೆ ರಾಯಚೂರು ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಿಗೆ, ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನು ಮತ್ತು ಶಾಖಾಧಿಕಾರಿಗಳನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಈ ಸಮಸ್ಯೆಯನ್ನು ಬಗೆಹರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು. |

| | |
|---|---|
| **ಕ್ರಮ ಸಂಖ್ಯೆ** | **12 / 28.07.2021** |
| **ಕುಂದು ಕೊರತೆ ವಿವರ** | ಸ್ಥಾವರ ಸಂಖ್ಯೆ HT261 ರ ಗ್ರಾಹಕರು ನಮಗೆ ಅತಿಯಾದ ಬಿಲ್ ವಿತರಿಸಲಾಗುತ್ತಿದೆ ಮತ್ತು ಅದರಲ್ಲಿ ಪಿಎಫ್ ದಂಡ ಕೂಡ ಹಾಕುತ್ತಿದ್ದಾರೆ ಅದನ್ನು ಏಕೆ ಹಾಕುತ್ತಿದ್ದಾರೆ ಮತ್ತು ಯಾವಾಗ ಹಾಕಿದ್ದಾರೆ ಎನ್ನುವ ಮಾಹಿತಿಯನ್ನು ನಮಗೆ ತಿಳಿಸುತ್ತಿಲ್ಲ ಎಂದು ದೂರಿದರು. |
| **ಕ್ರಮ** | ಈ ವಿಷಯವಾಗಿ ಗ್ರಾಹಕರಿಗೆ ಬಿಲ್ ನೀಡುವಾಗ ಮಾಪಕದಲ್ಲಿ ಇರುವ ಗಣಾಂಕಗಳನ್ನೇ ಆಧರಿಸಿ ಬಿಲ್ ತಯಾರಿಸಲಾಗುತ್ತದೆ, ಅದರಲ್ಲಿ ನಿಮ್ಮ ಬಿಲ್ಲಿಂಗ್ ಪವರ್ ಫ್ಯಾಕ್ಟರ್ ಕಡಿಮೆ ಬಂದಿದ್ದರೆ ನಿಯಮನುಸಾರ ನಿಮಗೆ ದಂಡ ಹಾಕಲಾಗುವುದು ಮತ್ತು ಅದನ್ನು ಬಿಲ್ ನಲ್ಲಿಯೇ ತೋರಿಸಲಾಗಿರುತ್ತದೆ ಎಂದು ವಿವರಿಸಲಾಯಿತು. |

| **ಕ್ರಮ ಸಂಖ್ಯೆ** | **13 / 28.07.2021** |
|---|---|
| **ಕುಂದು ಕೊರತೆ ವಿವರ** | ರಾಯಚೂರು ಗ್ರಾಮೀಣ ಉಪ ವಿಭಾಗದ 11 ಕೆವಿ ಫೀಡರ್ ನಲ್ಲಿ ಬರುವ ಹೆಚ್ ಟಿ ಗ್ರಾಹಕರು ನಮಗೆ ವಿದ್ಯುತ್ ಪೂರೆಕೆಯಲ್ಲಿ ತುಂಬಾ ವ್ಯತ್ಯಾಸಗಳು ಅಗುತ್ತಿವೆ ಸಮರ್ಪಕವಾದ ವಿದ್ಯುತ್ ಪೂರೈಕೆಯಾಗುತ್ತಿಲ್ಲ ಇದರಿಂದ ತೊಂದರೆಯಾಗುತ್ತಿದೆ ಇದನ್ನು ಆದಷ್ಟು ಶೀಘ್ರವಾಗಿ ಸರಿಪಡಿಸಿ ಎಂದು ಕೋರಿದರು |
| **ಕ್ರಮ** | ಈ ವಿಷಯವಾಗಿ ರಾಯಚೂರು ಗ್ರಾಮೀಣ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಿಗೆ, ಆದಷ್ಟು ಶೀಘ್ರವಾಗಿ ಸ್ಥಳ ಪರಿಶೀಲಿಸಿ ವಿದ್ಯುತ್ ಪೂರೈಕೆಯಲ್ಲಿ ಏಕೆ ವ್ಯತ್ಯಾಸ ಆಗುತ್ತಿದೆ ಎನ್ನುವುದಕ್ಕೆ ಕಾರಣ ಕಂಡುಹಿಡಿದು ಈ ಗ್ರಾಹಕರ ಸಮಸ್ಯೆ ಬಗೆಹರಿಸಲು ಸೂಚಿಸಲಾಯಿತು. |

| **ಕ್ರಮ ಸಂಖ್ಯೆ** | **14 / 28.07.2021** |
|---|---|
| **ಕುಂದು ಕೊರತೆ ವಿವರ** | ಹೆಚ್ ಟಿ ಸ್ಥಾವರ ಸಂಖ್ಯೆ HTR31 ರ ಗ್ರಾಹಕರು ಮಿಟ್ಟಿಮಲ್ಲಾಪುರ / ಮಲಿಯಾಬಾದ್ ನಲ್ಲಿ ಪ್ರತಿನಿತ್ಯ ಶಾಖಾಧಿಕಾರಿ ಮಟಮಾರಿ, ಯರಗೇರಾ ಮತ್ತು ಕಲಮಲ ಇವರು ಪದೇಪದೆ ಲೈನ್ ಕ್ಲಿಯರ್ ತೆಗೆದುಕೊಳ್ಳುವುದರಿಂದ, ನಮಗೆ ನಿರಂತರವಾಗಿ ವಿದ್ಯುತ್ ಪೂರೈಕೆಯಾಗುತ್ತಿಲ್ಲ ಈ ಸಮಸ್ಯೆಯನ್ನು ಅತಿ ಶೀಘ್ರವಾಗಿ ಬಗೆಹರಿಸಿಕೊಡಬೇಕು ಎಂದು ಕೋರಿದರು. |
| **ಕ್ರಮ** | ಈ ವಿಷಯವಾಗಿ ರಾಯಚೂರು ಗ್ರಾಮೀಣ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರಿಗೆ, ಆದಷ್ಟು ಶೀಘ್ರವಾಗಿ ಸ್ಥಳ ಪರಿಶೀಲಿಸಿ, ಶಾಖಾಧಿಕಾರಿಗಳು ಏಕೆ ಈ ರೀತಿ ಮೇಲಿಂದ ಮೇಲೆ ಒಂದೇ ಲೈನ್ ನಲ್ಲಿ ಲೈನ್ ಕ್ಲಿಯರ್ ತೆಗೆದುಕೊಂಡು ಗ್ರಾಹಕರಿಗೆ ವಿದ್ಯುತ್ ಪೂರೈಕೆಯಲ್ಲಿ ಅಡಚಣೆ ಮಾಡುತ್ತಿದ್ದಾರೆ ಎನ್ನುವುದಕ್ಕೆ ಕಾರಣ ಕಂಡುಹಿಡಿದು ಅದನ್ನು ಬಗೆಹರಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. |

**ಅಧೀಕ್ಷಕ ಅಭಿಯಂತರರು**
**ಕಾರ್ಯ ಮತ್ತು ಪಾಲನೆ ವೃತ್ತ**
**ಜೆಸ್ಕಾಂ ರಾಯಚೂರು**

**ಸೂಕ್ತ ಮತ್ತು ದಯಾಪರ ಮಾಹಿತಿಗಾಗಿ ಪ್ರತಿಯನ್ನು ಸಲ್ಲಿಸಲಾಗಿದೆ:**

1. ಮಾನ್ಯ ಮುಖ್ಯ ಅಭಿಯಂತರರು (ಕಾರ್ಯಾಚರಣೆ) ನಿಗಮ ಕಚೇರಿ, ಜೆಸ್ಕಾಂ, ಕಲಬುರಗಿ.
2. ಮಾನ್ಯ ಮುಖ್ಯ ಅಭಿಯಂತರರು, ಕಾರ್ಯ ಮತ್ತು ಪಾಲನೆ ವಲಯ, ಜೆಸ್ಕಾಂ, ಬಳ್ಳಾರಿ.

**ಮಾಹಿತಿಗಾಗಿ ಪ್ರತಿಯನ್ನು ಕೆಳಕಂಡ ಅಧಿಕಾರಿಗಳಿಗೆ ಕಳುಹಿಸುತ್ತಾ, ಸಂಬಂಧಿಸಿದ ದೂರಿಗೆ ತಾವು ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿವರವನ್ನು 1 ವಾರದ ಒಳಗಾಗಿ ಸಲ್ಲಿಸಲು ಸೂಚಿಸಲಾಗಿದೆ:**

3. ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗದ ಜೆಸ್ಕಾಂ ರಾಯಚೂರು.
4. ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ನಗರ ವಿಭಾಗ ಜೆಸ್ಕಾಂ ರಾಯಚೂರು.
5. ಕಾರ್ಯನಿರ್ವಾಹಕ ಅಭಿಯಂತರರು ಟಿ ಎಲ್&ಎಸ್ ಎಸ್ ವಿಭಾಗ ಕೆಪಿಟಿಸಿಎಲ್ ಲಿಂಗಸುಗೂರು.
6. ಕಾರ್ಯನಿರ್ವಾಹಕ ಅಭಿಯಂತರರು 220 ಕೆ ವಿ ರಿಸಿವಿಂಗ್ ಸ್ಟೇಷನ್ ಕೆಪಿಟಿಸಿಎಲ್ ರಾಯಚೂರು.
7. ಕಚೇರಿ ಕಡತಕ್ಕೆ.